## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಬೆಂಗಳೂರು ಕೇಂದ್ರೀಯ ವಿಭಾಗ : ಬೆಂಗಳೂರು

ಕ್ರಸಂ: ಕರಾಸಾ/ಬೆಂ.ಕೇ.ವಿ/ಸಂ/ವಾಣಿಜ್ಯ/1624/2018-19 ದಿನಾಂಕ:09-10-2018.

### "ಸಂಧಾನ ಪ್ರಕಟಣೆ ಸಂಖ್ಯೆ : 22/2018"

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗದ ವ್ಯಾಪ್ತಿಯಲ್ಲಿರುವ ನೆಲಮಂಗಲ ವಾಹನ ನಿಲ್ದಾಣದ ವಾಣಿಜ್ಯ ಸಂಕೀರ್ಣದಲ್ಲಿ ಖಾಲಿಯಿರುವ ಮಳಿಗೆ ಸಂಖ್ಯೆ: 11 ಮತ್ತು 12 ಕ್ಕೆ ಮತ್ತು ಮುಖ್ಯ ಕಟ್ಟಡದಲ್ಲಿರುವ ಮಳಿಗೆ ಸಂಖ್ಯೆ-2ನ್ನು ಸಾಮಾನ್ಯ ವರ್ಗಕ್ಕೆ ನಿಗದಿಪಡಿಸಿ ಜನರಲ್ ಸ್ಟೋರ್ ವ್ಯಾಪಾರ ಮಾಡಲು 05 ವರ್ಷಗಳ ಅವಧಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ಸಂಧಾನವನ್ನು ದಿನಾಂಕ: 30-10-2018 ರಂದು 14:00 ಗಂಟೆಗೆ ವಿಭಾಗೀಯ ನಿಯಂತ್ರಣಾಧಿಕಾರಿ ಕಛೇರಿ, ಕ.ರಾ.ರ.ಸಾ.ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ, ಶಾಂತಿನಗರ, ಬೆಂಗಳೂರು-560027 ರಲ್ಲಿ ನಡೆಸಲಾಗುವುದು. ಸಂಧಾನಕ್ಕೆ ಒಳಪಡುವ ಮಳಿಗೆಗಳ ವಿವರಗಳು ಈ ಕೆಳಕಂಡಂತಿವೆ.

| | | | | | ಅರ್ಜಿ ಶುಲ್ಕ |
|---|---|---|---|---|---|
| 1 | ಮಳಿಗೆ ಸಂಖ್ಯೆ-02 | ವಿಸ್ತೀರ್ಣ 112 ಚ.ಅ.ಗಳು | ರೂ.17,220-00 ಮಾಸಿಕ ಮಿ.ಶುಲ್ಕ | ಇ.ಎಂ.ಡಿ ರೂ. 51,660-00 | ರೂ.173+32-00 |
| 2 | ಮಳಿಗೆ ಸಂಖ್ಯೆ-11 | ವಿಸ್ತೀರ್ಣ 118 ಚ.ಅ.ಗಳು | ರೂ.30,403-00 ಮಾಸಿಕ ಮಿ.ಶುಲ್ಕ | ಇ.ಎಂ.ಡಿ ರೂ. 91209-00 | ರೂ.304+56-00 |
| 3 | ಮಳಿಗೆ ಸಂಖ್ಯೆ-12 | ವಿಸ್ತೀರ್ಣ 118 ಚ.ಅ.ಗಳು | ರೂ.35,152-00 ಮಾಸಿಕ ಮಿ.ಶುಲ್ಕ | ಇ.ಎಂ.ಡಿ ರೂ. 1,05,456-00 | ರೂ.352+64-00 |

ಸಂಧಾನದಲ್ಲಿ ಭಾಗವಹಿಸುವವರು ವಿಳಾಸದ ದೃಢೀಕರಣಕ್ಕೆ ಆಧಾರ್ ಕಾರ್ಡ್/ ಮತದಾರರ ಗುರುತಿನ ಚೀಟಿ / ಚಾಲನಾ ಪರವಾನಿಗೆಯ ಯಾವುದಾದರೂ ಪ್ರತಿಯನ್ನು ಮತ್ತು ಅರ್ಜಿಯ ಶುಲ್ಕವನ್ನು ಡಿಡಿ/ನಗದು ಮೂಲಕ ಸಲ್ಲಿಸಿ ಅರ್ಜಿಯನ್ನು ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು ಕಛೇರಿಯ ವೇಳೆಯಲ್ಲಿ ದಿನಾಂಕ: 30-10-2018 ರಂದು 12.00 ಗಂಟೆಯವರೆಗೆ ಪಡೆಯಬಹುದು. ಇ.ಎಂ.ಡಿ ಮೊತ್ತವನ್ನು Divisional Controller, KSRTC, Bengaluru Central Division, Bengaluru ರವರ ಹೆಸರಿನಲ್ಲಿ ಡಿಡಿ ಯನ್ನು ಸಲ್ಲಿಸುವುದು ಅಥವಾ ನಗದನ್ನು ಪಾವತಿಸಬಹುದು. ಮೂಲ ರಸೀತಿ / ಮೂಲ ಡಿಡಿ ಮತ್ತು ಸಂಬಂಧಪಟ್ಟ ದಾಖಲಾತಿಗಳನ್ನು ಅರ್ಜಿಯೊಂದಿಗೆ ಅಡಕಗೊಳಿಸದೇ ಇದ್ದ ಪಕ್ಷದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಯಾವುದೇ ಕಾರಣ ನೀಡದೆ ಸಂಧಾನವನ್ನು ಪುರಸ್ಕರಿಸುವ/ರದ್ದುಪಡಿಸುವ ಅಥವಾ ಮಾರ್ಪಾಡು ಮಾಡುವ ಹಕ್ಕನ್ನು ಕ.ರಾ.ರ.ಸಾ. ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 7760990029 & 7760990252 ಗಳನ್ನು ಸಂಪರ್ಕಿಸಲು ಕೋರಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ.
ಕ.ರಾ.ರ.ಸಾ. ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ.
ಶಾಂತಿನಗರ, ಬೆಂಗಳೂರು-560027.